ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	205
ಸದಸ್ಯರ ಹೆಸರು	:	ಶ್ರೀ ಎಸ್.ರುದ್ರೇಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	18-7-2019
ಉತ್ತರಿಸುವ ಸಚಿವರು	:	ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಶಿವಮೊಗ್ಗ ಜಿಲ್ಲೆಯ ಭದ್ರಾವತಿ ನಗರದಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ರವರಿಂದ ಸ್ಥಾಪಿತವಾದ ಮೈಸೂರು ಕಾಗದ ಕಾರ್ಖಾನೆಯನ್ನು 2015 ರಿಂದ ಏಕಾಏಕಿಯಾಗಿ ಮುಚ್ಚಲು ಕಾರಣವೇನು; (ಈ ಬಗ್ಗೆ ಈವರೆಗಿನ ಪೂರ್ಣ ವರದಿಯನ್ನು ನೀಡುವುದು);	ಮೈಸೂರು ಕಾಗದ ಕಾರ್ಖಾನೆಯು ರಾಜ್ಯ ಸರ್ಕಾರದ ಒಂದು ಉದ್ದಿಮೆಯಾಗಿದ್ದು, ಸಂಸ್ಥೆಯು ತೀವ್ರತರಹದ ಹಣಕಾಸಿನ ಸಮಸ್ಯೆಯನ್ನು ಎದುರಿಸುತ್ತಿದ್ದು, ಇಲ್ಲಿಯವರೆಗೆ ಒಟ್ಟು ಸಂಚಿತ ನಷ್ಟ 1093.59 ಕೋಟಿ ರೂ.ಗಳಷ್ಟು ಆಗಿದ್ದು, ಸರ್ಕಾರವು ಕಾರ್ಖಾನೆಯ ಪುನರುಜ್ಜೀವನ ಸಾಧ್ಯವಿಲ್ಲವೆಂದು ತೀರ್ಮಾನಿಸಿ ಕಾರ್ಖಾನೆಯ ಕಾರ್ಯಚಟುವಟಿಕೆಗಳನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದಲ್ಲಿ ನೀಡಬೇಕೆಂದು ತೀರ್ಮಾನ ಕೈಗೊಂಡು, ಕಾರ್ಖಾನೆಯ ಎಲ್ಲಾ ಉತ್ಪಾದನಾ ಘಟಕಗಳನ್ನು ದಿನಾಂಕ 21-11-2015 ರಿಂದ ಸ್ಥಗಿತಗೊಳಿಸಲಾಗಿರುತ್ತದೆ.
ಆ.	ಈ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಾವಿರಾರು ಕಾರ್ಮಿಕರು ಬೀದಿಗೆ ಬಂದಿದ್ದು, ಅವರ ಕುಟುಂಬಗಳು ವಿನಾಕರಣ ದುಸ್ಥಿತಿಗೆ ತಳ್ಳಲ್ಪಟ್ಟಿರುವುದರಿಂದ ಜೀವನೋಪಾಯಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?	ಸರ್ಕಾರವು ಎಲ್ಲಾ ಖಾಯಂ ಉದ್ಯೋಗಿಗಳಿಗೆ ಸ್ವಯಂ ನಿವೃತ್ತಿ ಯೋಜನೆ ಹಾಗೂ ಎಲ್ಲಾ ಗುತ್ತಿಗೆ ಆಧಾರದ ಕಾರ್ಮಿಕರಿಗೆ ಸ್ವಯಂ ಪ್ರತ್ಯೇಕೀಕರಣ ಯೋಜನೆಯು ಅನ್ವಯವಾಗುವಂತೆ ಅನುಷ್ಠಾನಗೊಳಿಸಲು ಸುಮಾರು 345 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಿದೆ. ದಿನಾಂಕ 30-11-2017 ರಲ್ಲಿ ಖಾಯಂ ಉದ್ಯೋಗಿಗಳು 1035 ಇದ್ದು, ಇವರಲ್ಲಿ ಸುಮಾರು 785 ಉದ್ಯೋಗಿಗಳು ಸ್ವಯಂ ನಿವೃತ್ತಿಯೋಜನೆಯಲ್ಲಿ ನಿವೃತ್ತಿ-ಗೊಂಡಿರುತ್ತಾರೆ ಹಾಗೂ 28 ಖಾಯಂ ಉದ್ಯೋಗಿಗಳು ನಿವೃತ್ತಿ / ಮೃತರಾಗಿರುತ್ತಾರೆ. ಸ್ವಯಂ ನಿವೃತ್ತಿಗೊಂಡ

ಖಾಯಂ ನೌಕರರಿಗೆ ಹಾಗೂ ನಿವೃತ್ತಿಗೊಂಡವರು ಹಾಗೂ ಮೃತರಾದ ಕಾರ್ಮಿಕರ ಅವಲಂಬಿತರಿಗೆ ಕಾನೂನು ಪ್ರಕಾರ ಸಲ್ಲಬೇಕಾದ ಎಲ್ಲಾ ಹಿಂಬಾಕಿಗಳಾದ ಸ್ವಯಂ ನಿವೃತ್ತಿ ಯೋಜನೆಯ ಸೌಲಭ್ಯ ಉಪಧನ, ಭವಿಷ್ಯ ನಿಧಿ, ರಜೆ ನಗಧೀಕರಣ, ಬೋನಸ್, ಸೂಪರ್ ಆನ್ಯುಯೇಷನ್ ವಾರ್ಷಿಕ ವೇತನ ಬಡ್ತಿ, ತುಟ್ಟಿ ಭತ್ಯೇ ಹಾಗೂ ಕಾಲಮಿತಿ ಬಡ್ತಿ ಇವುಗಳೆಲ್ಲವನ್ನು ಲೆಕ್ಕಾಚಾರ ಮಾಡಿ ಇದರಲ್ಲಿ ಶೇಕಡ 10 ರಷ್ಟು ಆಡಿಟ್ ಕಾಷನ್ ಹಣವಾಗಿ ಕಂಪನಿಯ ಲೆಕ್ಕದಲ್ಲಿ ಉಳಿಸಿಕೊಂಡು ಸ್ವಯಂ ನಿವೃತ್ತಿಗೊಂಡ ಹಾಗೂ ವಯೋ ನಿವೃತ್ತಿಗೊಂಡವರು ಹಾಗೂ ಮೃತರಾದ ಕಾರ್ಮಿಕರ ಅವಲಂಬಿತರಿಗೆ ದಿನಾಂಕ 30-11-2017 ರವರೆಗೆ ಅನ್ವಯವಾಗುವಂತೆ ಪಾವತಿಸಲಾಗಿದೆ.

ಮುಂದುವರೆದು, 222 ಖಾಯಂ ಕಾರ್ಮಿಕರು ಮತ್ತು ಅಧಿಕಾರಿಗಳು ಕಂಪನಿಯ ಮಸ್ಟರ್ ರೋಲ್ ನಲ್ಲಿದ್ದು, 117 ಖಾಯಂ ಉದ್ಯೋಗಿಗಳು (ಕಾರ್ಮಿಕರು ಮತ್ತು ಅಧಿಕಾರಿಗಳು) ನಿಯೋಜನೆಯಡಿಯಲ್ಲಿ ಸರ್ಕಾರದ ವಿವಿಧ ನಿಗಮ / ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ 105 ಖಾಯಂ ಉದ್ಯೋಗಿಗಳು ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ದಿನಾಂಕ 30-11-2017 ರಲ್ಲಿ 1034 ಗುತ್ತಿಗೆ ಕಾರ್ಮಿಕರಿದ್ದು, 1028 ಗುತ್ತಿಗೆ ಕಾರ್ಮಿಕರು ಸ್ವಯಂ ಪ್ರತ್ಯೇಕೀಕರಣ ಯೋಜನೆಯಲ್ಲಿ ನಿವೃತ್ತಿ ಹೊಂದಿರುತ್ತಾರೆ. ಸ್ವಯಂ ಪ್ರತ್ಯೇಕೀಕರಣ ಯೋಜನೆ ಜಾರಿಗೊಳಿಸುವ ಮುನ್ನ 04 ಗುತ್ತಿಗೆ ಕಾರ್ಮಿಕರು ಮೃತರಾಗಿದ್ದು ಉಳಿದ 02 ಗುತ್ತಿಗೆ ಕಾರ್ಮಿಕರು ಸ್ವಯಂ ಪ್ರತ್ಯೇಕೀಕರಣ ಯೋಜನೆಯನ್ನು ಪಡೆದಿರುವುದಿಲ್ಲ. ಗುತ್ತಿಗೆ ಕಾರ್ಮಿಕರಿಗೆ ಸಲ್ಲಬೇಕಾದ ಎಲ್ಲಾ ಹಿಂಬಾಕಿಗಳಾದ ಉಪಧನ, ಭವಿಷ್ಯನಿಧಿ, ರಜೆ ನಗದೀಕರಣ, ಬೋನಸ್ ಹಾಗೂ

ಪ್ರತಿ ವರ್ಷದ ಏಪ್ರಿಲ್ ತಿಂಗಳಿನಲ್ಲಿ ಏರಿಕೆಯಾಗುವ ತುಟ್ಟಿ ಭತ್ಯೆಯನ್ನು ಲೆಕ್ಕಾಚಾರ ಮಾಡಿ ಇದರಲ್ಲಿ ಶೇ. 10 ರಷ್ಟು ಆಡಿಟ್ ಕಾಷನ್ ಡಿಪಾಸಿಟ್ ಕಂಪನಿಯ ಲೆಕ್ಕದಲ್ಲಿ ಉಳಿಸಿಕೊಂಡು ಸ್ವಯಂ ಪ್ರತ್ಯೇಕೀಕರಣಗೊಂಡ ಹಾಗೂ ನಿವೃತ್ತಿ ಗೊಂಡವರು ಹಾಗೂ ಮೃತರಾದ ಗುತ್ತಿಗೆ ಕಾರ್ಮಿಕರ ಅವಲಂಬಿತರಿಗೆ ನಿಯಮಾನುಸಾರ ಪಾವತಿಸಲಾಗಿದೆ.

ಕಾರ್ಮಿಕ ಕಾರ್ಯದರ್ಶಿಯವರ ಆದೇಶ ದಿನಾಂಕ 28-6-2019 ರ ಪ್ರಕಾರ ಕಾರ್ಖಾನೆಯ ಉತ್ಪಾದನಾ ಚಟುವಟಿಕೆಯನ್ನು ಮುಚ್ಚಲು ಅನುಮತಿ ನೀಡಿರುವುದರಿಂದ ಕಾನೂನಿನನ್ವಯ ಅರ್ಹ ಪರಿಹಾರಧನ ಮತ್ತು ಅವರಿಗೆ ನೀಡಬೇಕಾಗಿರುವ ಎಲ್ಲಾ ಹಿಂಬಾಕಿಗಳಾದ ಉಪಧನ, ಭವಿಷ್ಯನಿಧಿ, ರಜೆ ನಗದೀಕರಣ, ಬೋನಸ್, ಸೂಪರ್ ಅನ್ಯುಯೇಷನ್, ವಾರ್ಷಿಕ ವೇತನ ಬಡ್ತಿ, ತುಟ್ಟಿ ಭತ್ಯೆ ಹಾಗೂ ಕಾಲಮಿತಿ ಬಡ್ತಿಗಳನ್ನು ಲೆಕ್ಕಾಚಾರ ಮಾಡುವ ಕಾರ್ಯವು ಪ್ರಗತಿಯಲ್ಲಿದೆ.

ಸಂಖ್ಯೆ : ಸಿಐ 22 ಸಿಪಿಎಂ 2019

(ಕೆ.ಜೆ.ಜಾರ್ಜ್)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು